# ಅನುಭವದಡಿಗೆಯ ಮಾಡಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 28
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 336
3. **Note:** Lyrics given here are as per Ref. 1. The wordings in Ref. 2 are same as in Ref. 1. Singer has followed these lyrics.

ರಾಗ: ನಾದನಾಮಕ್ರಿಯೆ ತಾಳ: ಛಾಪು

ಅನುಭವದಡುಗೆಯ ಮಾಡಿ ಅದ
ಕ್ಕನುಭವಿಗಳು ಬಂದು ನೀವೆಲ್ಲ ಕೂಡಿ || ಪ ||

ತನುವೆಂಬ ಭಾಂಡವ ತೊಳೆದು ಕೆಟ್ಟ
ಮನದ ಚಂಚಲವೆಂಬ ಮುಸುರೆಯ ಕಳೆದು
ಘನವಾಗಿ ಮನೆಯನ್ನು ಬಳಿದು ಅಲ್ಲಿ
ಮಿನುಗುವ ತ್ರಿಗುಣವ ಒಲೆಗುಂಡ ನೆಡೆದು || ೧ ||

ವಿರಕ್ತಿಯೆಂಬುವ ಮಡಿಯುಟ್ಟು ಪೂರ್ಣ
ಹರಿಭಕ್ತಿಯೆಂಬ ನೀರನ್ನೆಸರಿಟ್ಟು
ಅರಿವೆಂಬ ಬೆಂಕಿಯ ಕೊಟ್ಟು ಮಾಯಾ
ಮರೆವೆಂಬ ಕಾಷ್ಟವ ಮುದದಿಂದ ಸುಟ್ಟು || ೨ ||

ಶರಣೆಂಬೊ ಸಾಮಗ್ರಿ ಹೂಡಿ ಮೋಕ್ಷ
ಪರಿಕರವಾದಂಥ ಪಾಕವ ಮಾಡಿ
ಗುರು ಶರಣರು ಸವಿದಾಡಿ ನಮ್ಮ
ಪುರಂದರ ವಿಠಲನ ಬಿಡದೆ ಕೊಂಡಾಡಿ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಅಧ್ಯಾತ್ಮ ಸಾಧನೆಯ ವಿವರಗಳು ಇಲ್ಲಿ ಬಂದಿದೆ.

**ಅನುಭವದಡುಗೆ –** ತನ್ನ ಹೃದಯ ಕಮಲದಲ್ಲಿ ಸಾಧಕನು ಮಾಡುವ ಮಾನಸ ಪೂಜೆಯಿಂದ ಸಿದ್ಧವಾದ ಬಿಂಬಾಪರೋಕ್ಷದ ಅನುಭವ; ಇದನ್ನು ಅಡುಗೆಯೆಂದು ಕರೆದಿದ್ದಾರೆ.

**ಭಾಂಡ –** ಗಡಿಗೆ, ಪಾತ್ರೆ.

**ತ್ರಿಗುಣದ ಒಲೆಗುಂಡ ನೆಡೆದು –** ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳೇ ಒಲೆಯ ಮೂರು ಕಲ್ಲುಗಳು.

**ಅರಿವು –** ಹರಿಮಾಹಾತ್ಮ್ಯೆಯ ಜ್ಞಾನ.

**ಮಾಯಾ ಮರೆವೆಂಬ ಕಾಷ್ಠವ –** ಸ್ವಾತಂತ್ರ್ಯಭ್ರಮ, ಕರ್ತೃತ್ವಭ್ರಮ, ಭೋಕ್ತೃತ್ವಭ್ರಮ ಇವು ಮಾಯೆ; ಅನ್ಯಥಾಜ್ಞಾನದಿಂದ ಒದಗುವ ಹರಿವಿಸ್ಮರಣೆ ಮರೆವು. ಇವನ್ನು ಕಟ್ಟಿಗೆಯಂತೆ ಸುಡಬೇಕೆಂದು ಭಾವ.

**ಶರಣೆಂಬೊ –** ಬಿಂಬನೇ ಪ್ರೇರಕ, ನೇಮಕ, ಮುಖ್ಯ ಕರ್ತೃ, ಮುಖ್ಯ ಭೋಕ್ತೃ ಎಂದು ಪ್ರತಿಬಿಂಬನಾದ ಜೀವನು ಬಿಂಬನಲ್ಲಿ ಮೊರೆಹೋಗುವುದು.

**ಪಾಕ –** ತೀವ್ರವಾದ ಮನಃಪ್ರಾವಣ್ಯ (ಹರಿಯಲ್ಲಿ).

**Classification:** Mundige
**Ankita:** Purandara Vittala
**Location:** NA
**Category:** Bimba Roopa, Jeevanoddhara, mahatmya jnana
**Sub-Category:** aduge, deha, mana, guna, virakti, maDi, purna, Krishna, bhakti, niru, karuna, moksha, sharana, bimba, bimba roopa,
**Pravachana:** NA
**Explanation:** NA